
# ಉತ್ತರ ದಿಕ್ಕಿಗೆ ತಲೆಯಿಕ್ಕಿದರೆ...

'ಯಾವ ದಿಕ್ಕಿಗಾದರೂ ಹೋಗು ಉತ್ತರಕ್ಕೆ ಮಾತ್ರ ಬೇಡ'
ನಮ್ಮ ಜನಪದ ಕತೆಗಳು ಶುರುವಾಗುವುದು ಹೀಗೆ
ಅವಕ್ಕೂ ಗೊತ್ತು ಒಂದಲ್ಲ ಒಂದು ದಿನ ಇವನು ಅಲ್ಲಿಗೆ ಹೋಗುತ್ತಾನೆ
ಕತೆ ಮುಂದುವರಿಯುತ್ತೆ
ಇವನೂ ಅಷ್ಟೆ, ಬೇಡವೆಂದುದನ್ನು ಮಾಡದೆ ಬಿಟ್ಟಾನೆಯೇ
ಕಳ್ಳಪ್ರಣಯ, ಸುಳ್ಳುಭಕ್ತಿ, ಮಳ್ಳುಲೋಕಪ್ರೀತಿ...
ಉಲ್ಲಂಘಿಸದೇ ಹೋದರೆ ಕತೆ ಮುಂದುವರಿಯಬೇಕಲ್ಲ!

ದಕ್ಷಿಣವನ್ನು ಕಂಡರೆ ಉತ್ತರಕ್ಕೆ ತಾತ್ಸಾರ
ಗೊಂಡಾರಣ್ಯ ಕಳ್ಳ ದಸ್ಯುಗಳಧೋಲೋಕ
ವಿಂಧ್ಯವೆಂದೂ ತಲೆಯೆತ್ತದಿರಲೆಂಬಹಂಕಾರ
ಪ್ರೀತಿಸಿದವಳ ಮೂಗು, ನೆಲೆ ಕೊಟ್ಟವನ ತಲೆ
ಬಲಿ ಬಲಿ ಬಲಿಯೋ ದೀವಳಿಗೆ ಎಳ್ಳಮಾಸಿ
ಸಾಲಾ ಮದರಾಸೀ!

ಉತ್ತರವು ಬಾಯಿ ತೆರೆದರೆ ರಾಮ ಹಣೆತುಂಬ ನಾಮ
ಎದುರಾದ ದನಗಾಹಿ ಹುಡುಗನ ಕೈಗೆ ಬಾಂಸುರಿ
ತಲೆಗೆ ನವಿಲುಗರಿ ಇಟ್ಟು ಅಲ್ಲೇ ಗರಗರ ತಿರುಗಲು ಹಚ್ಚಿ
ಪದ ಒಳಗೆ ಏಕತಾರಿ ಹೊರಗೆ
ಹೊಸಿಲ ಮೇಲೆ ಕುಳಿತು ವಸೂಲಿ ನಡೆದೇ ಇದೆ.




ಇನ್ನೂ ನಡೆದೇ ಇದೆ ಭಾರತವ ನೇತು ಹಾಕುವ ಪಾಠ
ಮೇಲಿನಿಂದ ಬಂದವರು ಆಳುವ ಆಟ
ದಿಕ್ಕು ತಪ್ಪಿ ಬಂದ ಕೊಲಂಬಸ್ಸನ ಕಾಟ
ನಮ್ಮ ನಮ್ಮ ಮನೆಗಳಲ್ಲಿ ನಾವು ಪರದೇಸಿ.

ನಮ್ಮ ಹೀರೋ ಉತ್ತರಕ್ಕೆ ಹೋಗಿ
ಏಳು ಸಮುದ್ರದಾಚೆಗಿನ ಕೀಳುಸಮುದ್ರ ದಾಟಿ
ಗುಡ್ಡದ ಗವಿಯ ಒಕ್ಕಣ್ಣ ರಕ್ಕಸನ ಮಣಿಸಿ
ರಾಜಕುಮಾರಿಯ ವರಿಸಿ ಕರೆತರಲಿ
ಇಲ್ಲಿಯ ಸೋಬಾನೆ ಅಲ್ಲಿಗೂ ಕೇಳಿಸಲಿ.

● ಎಸ್. ನಟರಾಜ ಬೂದಾಳು